# ಅಲೆಗಳಿಲ್ಲದ ಸಮುದ್ರ...

"ಸಮುದ್ರದಲ್ಲಿರೋ ಅಲೆಗಳೆಲ್ಲ ಖಾಲಿಯಾದ್ರೆ ಏನಾಗಬಹುದು?"

"ಖಾಲಿಯಾಗೋದು ಅಂದ್ರೇನು? ಸಮುದ್ರದ ಅಲೆಗಳು ಖಾಲಿಯಾಗೋಕೆ ಅವೇನು ಸಮುದ್ರದೊಳಗಿಂದ ಹುಟ್ತಾ ಇಲ್ವಲ್ಲಾ?"

"ಯಾಕೆ? ಈ ಅಲೆಗಳು ಮತ್ತೆಲ್ಲಿಂದ ಬರ್ತಿವೆ?"

"ಗಾಳಿ, ಮಾರುತದ ಚಲನೆಯಿಂದ!"

"ಬರೀ ಅಷ್ಟೇ ಇರ್ಲಿಕ್ಕಿಲ್ಲ! ಬರೀ ಗಾಳಿಯಿಂದ ಈ ಪಾಟಿ ಅಲೆಗಳು ಹುಟ್ಟೋ ಹಾಗಿದ್ರೆ ನಮ್ಮೂರ ಕೆರೆಗಳಲ್ಲೂ ಹುಟ್ಕೋಬೇಕಾಗಿತ್ತು, ಏನಂತೀಯಾ?!"

"ಹೌದಾ?"

"ಹೌದು! ನಾನೆಲ್ಲೋ ಓದಿದ್ದೆ, ಸಮುದ್ರದ ಎದೆಯೊಳಗೂ ಚಲನವಲನಗಳಿರುತ್ವೆ. ಅದ್ರಿಂದಾಗಿಯೇ ಸಮುದ್ರದಲ್ಲಿ ಅಲೆಗಳು ಹುಟ್ಟಿಕೊಳ್ಳುತ್ವೆ!"

"ಜೊತೆಗೆ ಗಾಳಿಯ ಚಲನೇನೂ ಸೇರಿಕೊಂಡು, ಇರಬಹುದು!" ಅವನು ತನ್ನದೂ ಒಂದು ಮಾತಿನ ಬಲದ ಮೇಲೆ ಒಪ್ಪಿಕೊಂಡ.

ಇವನು ಮತ್ತೆ ಕೇಳಿದ, "ಸರಿ ಈಗ ಹೇಳು, ಸಮುದ್ರದಲೆಗಳೆಲ್ಲ ಖಾಲಿಯಾದ್ರೆ ಏನಾಗಬಹುದು?"

"ಮ್! ಸಮುದ್ರ ಒಂದು ದೊಡ್ಡ ಸರೋವರದ ಥರಾ ಕಾಣಬಹುದು. ಆವಾಗ ಈ ಸಮುದ್ರವನ್ನ ಯಾರೂ ಸಮುದ್ರ ಅಂತ ಕರೆಯಲ್ಲ! ಒಂಥರಾ ಮಜಾ ಇರುತ್ತೆ ನೋಡು, 'ಅರಬ್ಬೀ ಸರೋವರ', 'ಹಿಂದೂ ಮಹಾಸರೋವರ!'" ಅವನ ಮಾತಿಗೆ ಇಬ್ಬರೂ ನಕ್ಕರು.

"ಅಷ್ಟೇ ಅಂತೀಯಾ? ಮತ್ತೇನೂ ಆಗಲ್ವಾ?" ಇವನು ಕೇಳಿದ,

"ಅದು ನನ್ನ ಐಡಿಯಾ. ಈಗ ನೀನು ಹೇಳು, ಸಮುದ್ರದಲೆಗಳೆಲ್ಲ ಖಾಲಿಯಾದ್ರೆ ಏನಾಗಬಹುದು?"

"ನನಗನ್ನಿಸೋ ಪ್ರಕಾರ, ಸಮುದ್ರದಲೆಗಳೆಲ್ಲ ಖಾಲಿಯಾದ್ರೆ ಸಮುದ್ರ ಸತ್ತು ಹೋಗುತ್ತೆ!"

---

ಛಳಿಗಾಲದ ಬೆಳಗಿನ ಗೋವಾದ ಹವೆ ಸುಖಕರವಾಗಿತ್ತು, ನೀಲಿಯಾಗಸದಲ್ಲಿ ಒಂಚೂರು ಮೋಡವಿಲ್ಲದಿದ್ದರೂ, ಸುಡುತಿದ್ದ ಸೂರ್ಯನಿದ್ದರೂ ಆ ಸುಡುವಿಕೆಯಲ್ಲಿ ಬಿಸುಪಿರಲಿಲ್ಲ, ಮೈ ಬೆವರುತಿದ್ದರೂ ಆ ಬೆವರು ಸುಸ್ತು ಮಾಡುತ್ತಿರಲಿಲ್ಲ. ಕಲಂಗುಟೆ ಬೀಚಿನ ಮರಳುದಿಣ್ಣೆಯ ಮೇಲೆ 'ಸೀಹಾರ್ಸ್' ಹೋಟೆಲ್‌ಗೆ ಸೇರಿದ್ದ ಎರಡು ಒರಗು ಮಂಚಗಳ ಮೇಲೆ ಶರತ್ ಮತ್ತು ಶಿಶಿರ್ ಅರಬ್ಬೀ ಸಮುದ್ರದೆದೆಗೆ ಕಾಲು ಬಿಸಾಕಿಕೊಂಡು ಕುಳಿತಿದ್ದರು. ಸಮುದ್ರ ತೀರದುದ್ದಕ್ಕೂ ನೂರಕ್ಕೂ ಮೀರಿದ ಹೋಟೆಲ್‌ಗಳು, ಕ್ಯಾಂಟೀನುಗಳು, 'ಬೀಚ್ ಶ್ಯಾಕ್'(ಗುಡಿಸಲು)ಗಳು, ಅವುಗಳ ಮುಂದೆ ಹಾಕಲ್ಪಟ್ಟ, ಆಯಾ ಹೋಟೇಲುಗಳ ಒರಗು ಮಂಚಗಳು, ಮಂಚಗಳ ಮೇಲಿನ ಹಾಸಿಗೆಗಳು, ಬಿಸಿಲಿಗೆ ನೆರಳಾಗಲು ನೆಡಲ್ಪಟ್ಟ ಬಣ್ಣ-ಬಣ್ಣದ ಛತ್ರಿಗಳು, ಆ ನೆರಳುಗಳಲ್ಲೆಲ್ಲ ಒರಗಿಕೊಂಡಿದ್ದ, ಅಂಗಾತ-ಮಕಾಡೆ ಬಿದ್ದುಕೊಂಡಿದ್ದ ಹತ್ತಾರು ದೇಶ-ಭಾಷೆಗಳ ಜನಸ್ತೋಮ, ಅವರ 'ಕಿಂಚಿತ್' ಅನ್ನಿಸೋ ಬಟ್ಟೆಗಳು. ಕಿವಿಗೆ ಸಂಗೀತದ ಗಿಟ್ಟ ಸಿಕ್ಕಿಸಿಕೊಂಡವರು, ಪುಸ್ತಕಗಳಲ್ಲಿ ಕಳೆದುಹೋದವರು, ನೊರೆ ನೊರೆ ಬಿಯರ್‌ನಲ್ಲಿ ತೇಗುತ್ತಿರುವವರು, ಸುಮ್ಮನೆ ಕುಳಿತು ಸಮುದ್ರದೆಡೆಗೆ ದಿಟ್ಟಿಸಿ ನೋಡುತ್ತಿರುವವರು, ಮಾಲೀಶು ಮಾಡುವ ಹುಡುಗಿಯರು, ಹಚ್ಚೆ ಹಾಕಲು ಗೋಗರೆಯುತ್ತಿರುವ ಹುಡುಗರು, ತರಹೇವಾರಿ ಮಣಿಸರ-ಕೈಕಟ್ಟುಗಳನ್ನು ಮಾರುತ್ತಿರುವ ಹೆಂಗಸರು... ಎಲ್ಲವನ್ನೂ ನೋಡುತ್ತ ಈ ಇಬ್ಬರೂ ತಮ್ಮೊಳಗೇ ಮಾತನಾಡಿಕೊಳ್ಳುತ್ತಿದ್ದರು.

ಶರತ್ ಕೇಳಿದ, "ಈ ಸಮುದ್ರ ಅಂತೀವಲ್ಲ ಇದಕ್ಕೂ ಸಾಗರಕ್ಕೂ ಇರೋ ವ್ಯತ್ಯಾಸ ಏನು? 'ಅರಬ್ಬೀ ಸಮುದ್ರ' ಯಾಕೆ ಸಮುದ್ರ 'ಹಿಂದೂಮಹಾಸಾಗರ' ಯಾಕೆ ಸಾಗರ?" ಇವನ ಪ್ರಶ್ನೆಗೆ ಅಲ್ಲೇ ಹೋಗುತ್ತಿದ್ದ ಬಿಳೀ ತೊಗಲಿನ ಹುಡುಗಿಯ ಮೇಲಿದ್ದ

ಗಮನವನ್ನು ಕಷ್ಟಪಟ್ಟು ಬದಲಿಸುತ್ತ ಶಿಶಿರ್ ಯೋಚಿಸುವನಂತೆ ನುಡಿದ, “ಮ್... ಬಹುಶಃ ಅವುಗಳ ವಿಸ್ತಾರ, ನೀರಿನ ಪ್ರಮಾಣಗಳ ಮೇಲೆ ಇವುಗಳನ್ನ ‘ಸಮುದ್ರ’ವೋ ‘ಸಾಗರ’ವೋ ಅಂತಾ ತೀರ್ಮಾನ ಮಾಡ್ತಾರೆ ಅನ್ಸುತ್ತೆ!”

“ಹೌದಾ? ವಿಸ್ತಾರ, ಪ್ರಮಾಣಗಳನ್ನ ಹೇಗೆ ನಿರ್ಧರಿಸ್ತಾರೆ ಅಂತೀಯಾ?”

“ಅಂದ್ರೆ?”

“ಅದೇ! ಯಾವುದೇ ಒಂದು ಭೌತಿಕ ಕಾಯದ ವಿಸ್ತಾರ, ಪ್ರಮಾಣಗಳನ್ನ ನಿರ್ಧರಿಸೋಕೆ ಅದರ ಆಳ, ಅಗಲ ಗೊತ್ತಿರಬೇಕು ತಾನೇ?”

“ಹೂಂ!”

“ಹಾಗಾದ್ರೆ, ಇಲ್ಲಿಂದ ಇಲ್ಲೀವರೆಗೆ ಅರಬ್ಬೀ ಸಮುದ್ರ ಹರಡ್ಕೊಂಡಿದೆ, ಇಲ್ಲಿಂದ ಆಚೆಗೆ ‘ಹಿಂದೂ ಮಹಾಸಾಗರ’. ಸೋ ಈ ಅರಬ್ಬೀ ಸಮುದ್ರದ ನೀರಿನ ಪ್ರಮಾಣ ಕಮ್ಮಿ ಇದೆ, ಇದು ಸಾಗರ ಆಗೋಕೆ ಲಾಯಕ್ಕಿಲ್ಲ, ಇದನ್ನ ಸಮುದ್ರ ಅನ್ನೋಣ...!”

“ಓ, ಹಾಗಾ? ಸಮುದ್ರ, ಸಾಗರಗಳ ಎಲ್ಲೆಗಳನ್ನ ಹೇಗೆ ಗುರ್ತಿಸ್ತಾರೆ ಅಂತಾನಾ?”

“ಹೌದು, ಇಲ್ಲಿಗೆ ಅರಬ್ಬಿ ಸಮುದ್ರ ಮುಗೀತು, ಇನ್ಮುಂದೆ ಇರೋ ನೀರೆಲ್ಲ ಹಿಂದೂ ಮಹಾಸಾಗರದ್ದು ಅಂತಾ ಹೇಗೆ ಹೇಳ್ತಾರೆ?”

“ಓಹ್! ಅಷ್ಟೊಂದು ಐಡಿಯಾ ಇಲ್ಲ!”

ಶರತ್ ನುಡಿದ, “ನನಗ್ಯಾರೋ ಯಾವಾಗ್ಲೋ ಹೇಳಿದ್ರು, ಕನ್ಯಾಕುಮಾರಿಗೆ ಹೋಗಿ ನೋಡಿದ್ರೆ, ಅರಬ್ಬೀ ಸಮುದ್ರ, ಹಿಂದೂ ಮಹಾಸಾಗರ ಮತ್ತೆ ಬಂಗಾಳ ಕೊಲ್ಲಿಗಳ ಸಂಗಮ ಸ್ಪಷ್ಟವಾಗಿ ಕಾಣುತ್ತೆ ಅಂತಾ; ಮೂರೂ ಸಮುದ್ರಗಳ ನೀರೂ ಸ್ವಲ್ಪ ಸ್ವಲ್ಪವೇ ಬೇರೆ ಬೇರೆ ಬಣ್ಣಗಳಲ್ಲಿ ಕಂಡು, ನಮಗೆ ಮೂರದರ ಪರಿಧಿ ಗೊತ್ತಾಗುತ್ತೆ ಅಂತಾ!”

“ಸಾಧ್ಯಾನೇ ಇಲ್ಲ!”

“ಆವಾಗ ನಂಬಿದ್ದೆ. ಆದ್ರೆ ಈಗೀಗ ನನಗೂ ಅನ್ನಿಸ್ತಾ ಇದೆ, ಹಾಗೆ ಬೇರೆ ಬೇರೆ ಸಮುದ್ರಗಳ ನೀರು ಬೇರೆ ಬೇರೆ ಬಣ್ಣಗಳಲ್ಲಿ ಕಾಣೋಕೆ ಸಾಧ್ಯ ಇಲ್ಲ ಅಂತಾ!”

“ಕರೆಕ್ಟ್!” ಸಮುದ್ರದ ನೀರು, ಅದರ ಅಲೆಗಳು, ಅಲ್ಲಿ ಆಟವಾಡುತಿದ್ದ ಜನರನ್ನು ಕಂಡು ಶಿಶಿರನಿಗೆ ಸಮುದ್ರದೊಳಕ್ಕೆ ಹೋಗುವ ಆಸೆಯಾಗುತ್ತಿತ್ತು!

ಶರತ್ ಕೇಳಿದ, “ಅಲ್ಲೇನೋ ನೋಡ್ತಾ ಇದೀಯಾ?”

“ಹಾಂ? ಹೂಂ!” ಅವನ ಅನ್ಯಮನಸ್ಕ ಉತ್ತರ ಕೇಳಿ ಇವನಿಗೆ ನಗು ಬಂತು. ಇವನು ನಕ್ಕಿದ್ದು ಕಂಡು ತನ್ನ ಅನ್ಯಮನಸ್ಕತೆಯ ಅರಿವಾಗಿ ಅವನೂ ನಕ್ಕ.

“ಬಾ ಶಿಶಿರಾ ನಿಂಗ್ಯಾಕೆ ಬೇಜಾರು? ನೀರಿಗಿಳಿಯೋಣ!” ಅವರಿಬ್ಬರೂ ಒರಗು ಮಂಚಗಳನ್ನು ಬಿಟ್ಟೆದ್ದು ತಂತಮ್ಮ ‘ಫ್ಲೋಟಿಂಗ್ ಬೋರ್ಡ್’ಗಳನ್ನು ಹಿಡಿದು ಅರಬ್ಬೀ ಸಮುದ್ರ ತೀರದ ಮರಳಿನ ದಿಣ್ಣೆಯನ್ನಿಳಿದರು. ಸಣ್ಣ ಸಕ್ಕರೆ ಮರಳಿನ ಹಾಸು, ಸಮುದ್ರದ ದಂಡೆಯುದ್ದಕ್ಕೂ ಚಾಚಿಕೊಂಡಿತ್ತು. ಶುಭ್ರವಾಗಿದ್ದ ನೀಲ ಸಮುದ್ರದ ನೀರು, ನೊರೆ ನೊರೆ ಅಲೆಗಳಾಗಿ ಬಂದು ತೀರದ ಮರಳ ಹಾಸನ್ನು ಆವರಿಸಿ, ಚುಂಬಿಸಿ ದೂರಾಗುತ್ತಿತ್ತು.

ಶರತ್‌ನಿಗೆ ಯಾಕೋ ಎಲ್ಲ ಖಾಲಿ ಖಾಲಿ ಎನಿಸಿತು. “ಈಗ ಸಮುದ್ರವನ್ನು ನೋಡ್ತಾ ಇದ್ರೂ ನನಗೇನೂ ಹೊಳೀತಿಲ್ಲ!”

ನೀರನ್ನು ನೋಡುತ್ತ ಏನೋ ಯೋಚಿಸುತ್ತಿದ್ದ ಶಿಶಿರನ ಯೋಚನಾಲಹರಿ ತುಂಡಾಯಿತು, “ಏನು?”

“ಅದೇ! ಮೊದಲೆಲ್ಲಾ ಹೇಳ್ತಾ ಇದ್ದೆನಲ್ಲಾ, ಸಮುದ್ರ ತೀರಕ್ಕೆ ಬಂದ್ರೆ ನನ್ನ ‘ಸೃಜನಶೀಲತೆ’ ಉಕ್ಕಿ ಹರಿಯುತ್ತೆ. ನನ್ನೆಲ್ಲಾ ಅಪದ್ದ, ಅಬದ್ದ ಯೋಚನೆಗಳಿಗೆಲ್ಲ ಸ್ಪಷ್ಟ ರೂಪ ಒಂದು ಬಂದುಬಿಡುತ್ತೆ, ಹೊಸ ಹೊಸ ಯೋಚನೆಗಳು, ಹೊಳಹುಗಳೆಲ್ಲ ಹೊಳೆಯಲಾರಂಭಿಸುತ್ತವೆ ಅಂತಾ. ಈಗ್ಯಾಕೋ ಆ ಥರದ್ದೇನೂ ಆಗ್ತಾ ಇಲ್ಲ! ಸಮುದ್ರ ನನ್ನೊಂದಿಗೆ ಮಾತನಾಡ್ತಾ ಇಲ್ಲ ಅನ್ಸುತ್ತೆ!”

“ಹ್ಮ!?” ಶಿಶಿರ ಸುಮ್ಮನೆ ಇವನ ಮುಂದಿನ ಮಾತುಗಳಿಗೆ ಕಾದ.

“ನಂಗ್ಯಾಕೋ ಸಮುದ್ರ ಈಗ ನಿರ್ಜೀವ ನೀರಿನ ತೊಟ್ಟಿ ಅನಿಸ್ತಾ ಇದೆ!”

“ಅದ್ಯಾವಾಗಲೂ ಹಾಗೇ ಇದ್ದಿದ್ದು ತಾನೇ?” ಶಿಶಿರ ಪರಿಸ್ಥಿತಿಯನ್ನು ತಿಳಿಗೊಳಿಸಲು ನಸುನಕ್ಕ.

“ನಿಂಗೊತ್ತು, ನನಗೆ ಸಮುದ್ರ ಯಾವತ್ತೂ ಒಂದು ನಿರ್ಜೀವ ವಸ್ತು ಅನ್ನಿಸಿದ್ದಿಲ್ಲ! ಅದೊಂದು ಜೀವಜಂತು, ನನ್ನೊಬ್ಬ ಸ್ನೇಹಿತ, ನಾನು ಬಂದು ಕಂಡಾಗಲೆಲ್ಲ ನನ್ನೊಡನೆ ಮಾತನಾಡುತ್ತಿದ್ದ ಸಹೃದಯಿ ಅಂತನಿಸುತ್ತಿತ್ತು. ಇವತ್ತು ನೋಡಿದ್ರೆ ಅದರೊಡನೆ ನನ್ನ ಸಂವಹನ ಸಾಧ್ಯವಾಗ್ತಾ ಇಲ್ಲ.”

“ನೀನು ಇನ್ನೂ ಹಳೆಯದ್ದನ್ನೆಲ್ಲ ಮರೆತಿಲ್ಲ ಶರೂ. ಎಲ್ಲವನ್ನೂ ಬೆಂಗಳೂರಿನಲ್ಲೇ ಬಿಟ್ಟು ಗೋವಾ ಬಸ್ಸು ಹತ್ತು ನಾನು ಹೇಳಿರಲಿಲ್ವಾ? ನಂಗೊತ್ತು ಹೇಳೋದು ಯಾವತ್ತಿದ್ರೂ ಸುಲಭ ಆದ್ರೆ ಪಾಲಿಸೋದು ಕಷ್ಟ. ಆದ್ರೆ ಮನುಷ್ಯ ಪ್ರಯತ್ನದ ಮುಂದೆ ಯಾವುದೂ ಕಷ್ಟ ಆಗಲ್ಲ, ಆಗಬಾರದೂ ಕೂಡಾ.”

“ಅದು ನಿಜ. ಎಲ್ಲವನ್ನೂ ಬಿಟ್ಟು ಬಸ್ಸು ಹತ್ತಿಬಂದಿದೀನಿ ಸರಿ, ಆದ್ರೆ ಮುಂದೆ ಹೊಸದಾದ ಆರಂಭ ನನ್ನನ್ನು ಕಾಯ್ತಾ ಇದೆ ಅನ್ನೋದು ಮಾತ್ರ ಸ್ವಲ್ಪ ಸಂಶಯಾಸ್ಪದ ನೋಡು!”

“ಯಾಕೆ?”

“ನನಗೆನಿಸಿದಂತೆ ನನ್ನ ಸಮುದ್ರದ ಅಲೆಗಳೆಲ್ಲ ಖಾಲಿಯಾಗಿಬಿಟ್ಟಿವೆ!”

“ಸೋ, ನಿನ್ನ ಪ್ರಕಾರ ಸಮುದ್ರ ಸತ್ತಿದೆ!” ಶಿಶಿರ ನಂಬದವನಂತೆ ಕೇಳಿದ.

“ಹೂಂ!”

ಶಿಶಿರ ಮೌನವಾಗಿದ್ದ, ಅವನ ಮುಖದಲ್ಲಿ ಗೇಲಿಯಿರಲಿಲ್ಲ. ಶರತ್ ಅವನ ಮುಖ ನೋಡುತ್ತ ನುಡಿದ,

“ನನ್ನ ಪಾಲಿಗೆ ಈಗ ಇದೊಂದು ನಿರ್ಜೀವ ವಸ್ತು, ನೀರಿನ ತೊಟ್ಟಿ. ಇದು ನನ್ನೊಂದಿಗೆ ಮಾತನಾಡ್ತಾ ಇಲ್ಲ. ಇದರಲ್ಲೀಗ ಅಲೆಗಳಿಲ್ಲ, ನನ್ನಲ್ಲೂ ಅಲೆಗಳಿಲ್ಲ!”

“ಸೋ, ನೀನೂ ಅದರ ಪಾಲಿಗೆ ಸತ್ತಿದೀಯಾ?”

“ಹೂಂ”

ಈಗ ಶಿಶಿರ ನಕ್ಕ, “ಈ ಡೋಸ್ ಸ್ವಲ್ಪ ಜಾಸ್ತಿಯಾಯ್ತು! ಬಾ ಸತ್ತಿರೋ ನಿನ್ನನ್ನ ಈ ಸತ್ತಿರೋ ಸಮುದ್ರದೊಳಕ್ಕೆ ಸೇರಿಸಿ ಬಿಡ್ತೀನಿ!”, ಎಂದವನೇ ಶರತ್‌ನ ಕೈ ಹಿಡಿದು ಎಳೆದುಕೊಂಡು ಸಮುದ್ರದೊಳಕ್ಕೆ ನಡೆದ.

---

ಎದೆಮಟ್ಟ ಅಲೆಗಳು ಬರುವವರೆಗೂ ಎಳೆದುಕೊಂಡು ಎಳೆದುಕೊಂಡು ಹೋದ ಶಿಶಿರ, ಈಜು ಬರದ ಶರತ್‌ನಿಗೆ ಈಜುವ, ನೀರಿನಲ್ಲಿ ತೇಲುವ ಕೆಲವು ರಹಸ್ಯಗಳನ್ನು ಹೇಳಿ ಕೊಟ್ಟ, ಒತ್ತಾಯ ಪೂರ್ವಕವಾಗಿ ತಾನು ಕಲಿಸಿದ್ದುದನ್ನು ಮತ್ತೆ ಮತ್ತೆ ಮಾಡಿ ತೋರಿಸಿ, ಪ್ರಯತ್ನಿಸುವಂತೆ ಮಾಡುತ್ತಿದ್ದ. ಇಲ್ಲಾಂದ್ರೆ ‘ಕತ್ತು ಹಿಡಿದು ಮುಳುಗಿಸಿ ಬಿಡ್ತೀನಿ’ ಅಂತೆಲ್ಲ ಹೆದರಿಸುತ್ತಿದ್ದ.

ಸಮುದ್ರದ ಪ್ರತಿಯೊಂದು ಅಲೆಯೂ ಅವರ ಎದೆಯೆತ್ತರಕ್ಕೆ ಬಂದು, ಅವರನ್ನು ಅಲುಗಿಸಿ, ಅವರನ್ನು ದಾಟಿಯಾದ ಮೇಲೆ ಸುರಳಿ ಸುತ್ತಿಕೊಂಡು ನೊರೆನೊರೆಯಾಗಿ ಬಿದ್ದು, ತೀರಕ್ಕೆ ತಲುಪಿಬಿಡುತ್ತಿದ್ದವು. ಇನ್ನೂ ಕೆಲವೊಂದು ಅವಸರದ ಹೆಬ್ಬಲೆಗಳು ಇವರಿಗಿಂತ ಮೊದಲೇ ಸುರುಳಿ ಸುತ್ತಿಕೊಂಡು ಇವರ ಮೇಲೆಯೇ ಬಿದ್ದು ಇವರನ್ನು ಉಸಿರುಗಟ್ಟಿಸುತ್ತಿದ್ದವು. ಶರತ್ ಪದೇ ಪದೇ ಮೂಗಿನಿಂದ ನೀರುಕುಡಿದು ಕಣ್ಣು ಕೆಂಪು ಮಾಡಿಕೊಳ್ಳುತ್ತಿದ್ದ; ಬಿಕ್ಕುತ್ತಿದ್ದ; ಉಸಿರು ಸಿಕ್ಕಿಸಿಕೊಳ್ಳುತ್ತಿದ್ದ, “ಅಲೆಗಳೇ ಇಲ್ಲಾಂತಿದ್ಯಲ್ಲ ಮಗಾ? ಹಿಡ್ಕಾ, ಮುಳ್ಗು, ಸಾಯಿ!” ಇಬ್ಬರೂ ನಗುತ್ತಿದ್ದರು, ಶಿಶಿರ ಹೇಳಿಕೊಟ್ಟಂತೆಯೇ ಅಲೆಗಳ ಮಡತೆ ಬಂದಾಗ ಮೆಲ್ಲನೆ ನೀರೊಳಗೇ ಕಾಲ್ಗಳನ್ನೆತ್ತಿ ಜಿಗಿದು, ಅಲೆಗಿಂತ ಮೇಲೆಯೇ ಯಾವಾಗಲೂ ತನ್ನ ತಲೆಯಿರುವಂತೆ ನೋಡಿಕೊಳ್ಳುತ್ತ ಶರತ್ ಸುಸ್ತಾದ...

ಸುಮಾರು ಹನ್ನೆರಡು ಗಂಟೆಯವರೆಗೂ ಶರತ್ ಮತ್ತು ಶಿಶಿರ್ ಸಮುದ್ರದ ನೀರಿನಲ್ಲಿ ಆಡಿದರು. ನಂತರ ಶಿಶಿರನಿಗೆ ‘ನಾನು ದಡಕ್ಕೆ ಹೋಗ್ತೀನಿ, ನಿನ್ನ ಕೆಲವು ಫೋಟೋ ತೆಗೀತೀನಿ’ ಅಂತ ಸಬೂಬು ಹೇಳಿ ನೀರಿನಿಂದ ಹೊರಬಂದ ಶರತ್ ಸೀದಾ ‘ಸೀಹಾರ್ಸ್’ಗೆ ಹೋಗಿ, ಮೊದಲೇ ಕೊಟ್ಟಿದ್ದ ತಮ್ಮ ಬ್ಯಾಗನ್ನು ತೆಗೆದುಕೊಂಡು ಹಾಗೇ ಸಮುದ್ರದೆಡೆಗೆ ತಿರುಗಿದ.

ಸಮುದ್ರ ಮೌನವಾಗಿತ್ತು, ನಿಶ್ಚಲವಾಗಿತ್ತು! ಹಸಿರು ನೀಲಿಯ ನೀರಿನ ಮೇಲ್ಮೈ ಅಲೆಗಳಿಲ್ಲದೇ ಶಾಂತವಾಗಿತ್ತು! ಇವನು ಬ್ಯಾಗಿನಲ್ಲಿದ್ದ ಕ್ಯಾಮೆರಾವನ್ನು ಅವಸರ-ಅವಸರದಿಂದ ತೆಗೆಯುತ್ತ ಮರಳಿನ ದಿಣ್ಣೆಯಿಂದಿಳಿದು ಸಮುದ್ರದ ನೀರಿನ ಬಳಿಗೆ ಬಂದ. ಇವನ ಕಾಲಿಗೆ ತಾಗಿದ ಸಮುದ್ರದ ನೀರು ಸಾಮಾನ್ಯಕ್ಕಿಂತ ತಣ್ಣಗಿತ್ತು, ಅದರಲ್ಲಿ ಜೀವದುಸಿರಿನ ಬಿಸುಪಿರಲಿಲ್ಲ. ಸಮುದ್ರ ನಿಜವಾಗಿಯೂ ಸತ್ತು ಹೋಗಿತ್ತು! ಹೊಸ ಅಲೆಗಳ ಆರಂಭದ ಸುಳಿವಿರಲಿಲ್ಲ! ಅಲ್ಲಿದ್ದ ಇತರರಿಗ್ಯಾರಿಗೂ ಇದರ ಪರಿವೆಯೇ ಇರಲಿಲ್ಲ. ಎಲ್ಲರೂ ತಂತಮ್ಮ ಪಾಡಿಗೆ ತಾವಿದ್ದರು. ಇವನು ದೂರದ ನೀರಿನಲ್ಲಿದ್ದ ಶಿಶಿರನನ್ನು ದಿಟ್ಟಿಸಿ ನೋಡಿದ. ಶಿಶಿರ ಯಾವುದೇ ಅಲೆಗಳ ರೇಜಿಗೆಯಿಲ್ಲದೇ ಸುಮ್ಮನೇ ತೇಲುತ್ತಿದ್ದ, ಇವನೆಡೆಗೆ ಕೈ ಬೀಸಿದ. ಇವನಿಗೆ ಒಂದು ಯೋಚನೆ ಬಂತು. 'ಈ ಸತ್ತ ಸಮುದ್ರದ ಫೋಟೋ ತೆಗೆಯೋಣ, ಆ ಫೋಟೋ ನೋಡಿದರೆ ನನಗೆ ಇದರ ಶ್ರದ್ಧಾಂಜಲಿಯಂತಹುದಾದರೂ ಹೊಳೆಯಬಹುದು' ಎಂದುಕೊಳ್ಳುತ್ತ ಕೆಲವು ಫೋಟೋಗಳನ್ನು ತೆಗೆದ. ನಂತರ ಅಲೆಗಳಿಲ್ಲದ ಸಮುದ್ರದ ಕೊನೆಯ ಕಣ್ಣೀರಿನ ಉಪ್ಪಿನಲ್ಲಿ ಕಾಲು ತೊಯಿಸಿಕೊಳ್ಳುತ್ತ ಕುಳಿತು, ಕ್ಯಾಮೆರಾದ ರಿವ್ಯೂ ಬಿರುಡೆ ತಿರುಗಿಸಿ ತೆಗೆದ ಫೋಟೋಗಳನ್ನು ನೋಡುತ್ತ ಕುಳಿತ. ಸತ್ತ ಸಮುದ್ರದ ಫೋಟೋಗಳನ್ನು ನೋಡುತ್ತಲೇ ಅವನಿಗೆ ಅಳು ಉಕ್ಕಿಬಂತು. ಯಾರಿಗೂ ಕಾಣದಂತೆ, ಮೊಣಕಾಲು ಮುಂದಕ್ಕೆ ಮಡಿಚಿ ಕುಳಿತಿದ್ದಂತೆ, ತೊಡೆಗಳ ನಡುವೆ ತಲೆಯಿಟ್ಟು ಬಿಕ್ಕಿ-ಬಿಕ್ಕಿ ಅತ, ಹಾಗೇ ಅವನ ಹೃದಯದಲ್ಲಿ 'ಶ್ರದ್ಧಾಂಜಲಿ'ಯ ಮೊದಲನೇ ಪದಗಳು ಮೂಡಿದವು...

ಎಲ್ಲ ಮುಗಿದ ನಂತರ ಕ್ಯಾಮೆರಾವನ್ನು ಬ್ಯಾಗಿನೊಳಗಿಟ್ಟು, ಬ್ಯಾಗನ್ನು ವಾಪಸ್ಸು 'ಸೀಹಾರ್ಸ್'ನಲ್ಲಿಟ್ಟು ಶರತ್ ವಾಪಸ್ಸು ಮರಳು ದಿಣ್ಣೆ ಇಳಿದು ಸಮುದ್ರ ತೀರಕ್ಕೆ ಬಂದ. ದೂರದ ನೀರಿನಲ್ಲಿ ಶಿಶಿರ ಇನ್ನೂ ಮುಳುಗು ಏಳುವಾಟವಾಡುತ್ತಿದ್ದ, ಜನರೆಲ್ಲ ಮೊದಲಿದ್ದ ಹಾಗೇ, ತಮ್ಮೊಳಗೆ ತಾವು ವ್ಯಸ್ತರಾಗಿದ್ದರು. ಸತ್ತ ಸಮುದ್ರ ಮೆಲ್ಲನೆ ವಾಸನೆ ಬರಲಾರಂಭಿಸಿತು, ಇವನು ಆಗಲೇ ಬಿಸಿಲಿಗೆ ಒಣಗುತ್ತಿದ್ದ ತನ್ನ ಬನಿಯನ್ನು, ಈಜು-ಚಡ್ಡಿಯಲ್ಲಿ ಹಾಗೇ ತೀರದಗುಂಟ ನಡೆಯಲಾರಂಭಿಸಿದ...

---

ಮಧ್ಯಾಹ್ನ ಎರಡು ಗಂಟೆಗೆಲ್ಲ ಸಮುದ್ರದೊಳಗೆ ಆಡುತ್ತಿದ್ದ ಶಿಶಿರನಿಗೆ ಹಸಿವಾಗಲಾರಂಭಿಸಿತು. ಮೆಲ್ಲನೆ ಸಮುದ್ರದಲೆಗಳೊಡನೆ ತೇಲಿಕೊಂಡು ತೀರಕ್ಕೆ ಬಂದವನಿಗೆ, ತೀರದಲ್ಲಿ ಶರತ್ ಕಾಣಲಿಲ್ಲ. 'ಸೀಹಾರ್ಸ್'ನೊಳಗಿರಬಹುದೆಂದು ತನ್ನ ಕೈಯಲ್ಲಿದ್ದ 'ಫ್ಲೋಟ್ ಬೋರ್ಡ್'ನ್ನು ಹಿಡಿದುಕೊಂಡು ಮರಳ ದಿಣ್ಣೆಹತ್ತಿ, 'ಸೀಹಾರ್ಸ್' ಗುಡಿಸಲು ಹೊಕ್ಕವನಿಗೆ ಆ ನೆರಳಿಗೆ ದೃಷ್ಟಿ ಹೊಂದಿಸಿಕೊಳ್ಳಲು ಸ್ವಲ್ಪ ಸಮಯ ಬೇಕಾಯಿತು. ಅಷ್ಟರಲ್ಲಿ ಸಪ್ಲೆಯರ್ ಸಾಗಿ ಬಂದ.

"ಏನು ಕೊಡ್ಲಿ ಸಾರ್?"

"ನಾವು ಇಲ್ಲೇ ಬ್ಯಾಗ್ ಇಟ್ಟಿದ್ವಿ ಬೆಳಿಗ್ಗೆ, ಇಲ್ಲೇ ಊಟ ಮಾಡ್ತೀವಿ ಕೂಡ. ನಾನು ನನ್ನ ಸ್ನೇಹಿತನ್ನ ಹುಡುಕುತಿದ್ದೆ!"

"ಓಹ್ ನೀವಾ? ಅವ್ರು ಬ್ಯಾಗ್ ತಗೊಂಡು ಹೋದ್ರಲ್ಲಾ ಆವಾಗ್ಲೇ!"

"ಹೌದಾ, ಎಲ್ಲಿಗೆ..." ಇವನ ಪ್ರಶ್ನೆಯನ್ನು ಕತ್ತರಿಸಿ, ಅಲ್ಲೇ ಮೂಲೆಯಲ್ಲಿ ಗಲ್ಲಾದ ಮೇಲೆ ಕುಳಿತಿದ್ದ 'ಸೀಹಾರ್ಸ್' ನ ಮಾಲಕಿ ಕರೆದಳು, "ಇಲ್ಲ, ಮತ್ತೆ ಬ್ಯಾಗ್ ಇಲ್ಲೇ ತಂದಿಟ್ಟಿದ್ದಾರೆ ನಿಮ್ಮ ಸ್ನೇಹಿತ!" ಸಪ್ಲೆಯರ್ ಹುಡುಗ ಇವನಿಗೊಂದು ಕ್ಲುಪ್ತವಾದ 'ಸಾರಿ' ಹೇಳಿ ಅತ್ತ ಹೋದ.

ಇವನು ಅವಳನ್ನು ಕೇಳಿದ, "ಎಲ್ಲಿ ಹೋದ ಅವನು?"

"ಇಲ್ಲೇ ಎಲ್ಲೋ ಇರ್ತಾರೆ, ಬರ್ತಾರೆ ಕಾದು ನೋಡಿ!"

ಶಿಶಿರನಿಗೆ ಹೊಟ್ಟೆ ಹಸಿಯುತ್ತಿತ್ತು. ಆದರೂ ಶರತ್ ಬಂದ ಮೇಲೆಯೇ ಊಟ ಮಾಡೋಣವೆಂದು ಬರಿಯ 'ಸ್ಟ್ರಾಬೆರಿ' ಮಿಲ್ಕ್ -ಶೇಕ್ ಆರ್ಡರ್ ಮಾಡಿ, ಅಲ್ಲೇ ನೆರಳಿನ ಕುರ್ಚಿಯೊಂದರಲ್ಲಿ ಕುಳಿತ...

ಗಂಟೆ ಮೂರುವರೆಯಾದರೂ ಶರತ್ ಬರದುದರಿಂದ ಶಿಶಿರ ಊಟ ಮಾಡಿ, ದುಡ್ಡು ಕೊಟ್ಟು ಬ್ಯಾಗನ್ನು ಇಸಿದುಕೊಂಡು ಕಲಂಗುಟೆ ಬೀಚಿನುದ್ದಕ್ಕೂ ಅಡ್ಡಾಡಿದ. ಎಲ್ಲೂ ಅವನು ಕಾಣಲಿಲ್ಲ. ಸಮುದ್ರದಲ್ಲಿ ಆಟವಾಡುತ್ತಿದ್ದವರಲ್ಲೂ ಅವನನ್ನು ಹುಡುಕಿದ, ಬ್ಯಾಗಿನಿಂದ ತನ್ನ ಮೊಬೈಲ್ ತೆಗೆದು ನೋಡಿಕೊಂಡ, ಯಾವುದೂ ಮಿಸ್-ಕಾಲ್ ಇರಲಿಲ್ಲ. ಮೊಬೈಲ್‌ನ ಸಿಗ್ನಲ್ ಚೆನ್ನಾಗೇ ಇತ್ತು. ಹಾಗೇ ಬ್ಯಾಗಿನೊಳಗೆ ತಡಕುತ್ತಿದ್ದವನಿಗೆ ಶರತ್‌ನ ಮೊಬೈಲೂ ಸಿಕ್ಕಿತು! ಇವನಿಗ್ಯಾಕೋ ಭಯವಾಯಿತು. ಮೊಬೈಲಿನ ಜೊತೆಗಿದ್ದ

ಕ್ಯಾಮೆರಾ ತೆಗೆದುಕೊಂಡು ಕೊರಳಿಗೆ ನೇತು ಹಾಕಿಕೊಂಡ, ಅದರ ರಿವ್ಯೂ ಬಿರಡೆ ತಿರುವಿದ, ಕ್ಯಾಮೆರಾದಲ್ಲಿ ಬರಿಯ ಸಮುದ್ರದ ಫೋಟೋಗಳಿದ್ದವು; ಅಲೆ ಸರಿದು ಹೋಗಿ, ಮುಂದಿನ ಅಲೆ ಬರುವ ಮುಂಚಿನ ಖಾಲೀ ನೀರಿನ ಹಾಳೆಗಳ ಫೋಟೋಗಳಿದ್ದವು. ನಿಜಕ್ಕೂ ನೋಡಿದರೆ ಫೋಟೋಗಳಲ್ಲಿನ ಸಮುದ್ರದ ನೀರಿನ ಮೇಲ್ಮೈ ಅಲೆಗಳಿಲ್ಲದೇ ಸಪಾಟಾದಂತೆ ಕಾಣುತ್ತಿತ್ತು!

ಆರೂವರೆಗೆಲ್ಲ ಸೋತ ಕಾಲೆಳೆದುಕೊಂಡು 'ಸೀಹಾರ್ಸ್'ಗೆ ವಾಪಸ್ಸು ಬಂದ ಶಿಶಿರನಿಗೆ ನಿರಾಸೆ ಕಾದಿತ್ತು. ಶರತ್ ಇನ್ನೂ ವಾಪಸ್ಸು ಬಂದಿರಲಿಲ್ಲ. ಇವನ ಪ್ರಶ್ನೆಯಿಂದ ಜಾಗೃತರಾದ ಹೋಟೇಲಿನ ಮಾಲಕಿ ಕೆಲಸದಿಬ್ಬರು ಹುಡುಗರನ್ನು ಕರೆದು ಇತರೇ ಗುಡಿಸಲುಗಳಿಗೆ, ಸಮುದ್ರದೆಡೆಯಿಂದ ಬಂದಿರಬಹುದಾದ ಸುದ್ದಿ ತರಲು ಕಳಿಸಿದಳು. ಇವನು ಮನಸ್ಸಿಲ್ಲದ ಮನಸ್ಸಿನಿಂದ ರಾತ್ರಿಯ ಊಟವನ್ನೂ ಮಾಡಿ ಗೆಸ್ಟ್-ಹೌಸಿನ ತನ್ನ ರೂಮಿಗೆ ಬಂದು ಮಲಗಿದ.

ಮರುದಿನ ಬೆಳಿಗ್ಗೆ ಇವನು ನಿನ್ನೆ ತಾವಿಬ್ಬರು ಬಂದಾಗಲೇ ಬಾಡಿಗೆಗೆ ತೆಗೆದುಕೊಂಡಿದ್ದ 'ಕೈನೆಟಿಕ್ ಹೊಂಡ'ದಲ್ಲಿ ಅಕ್ಕಪಕ್ಕದ ಬೀಚ್‌ಗಳನ್ನೆಲ್ಲ ಅಲೆದ. ಅಲೆದಾಟದಿಂದ ಇಳಿ ಮದ್ಯಾಹ್ನದ ಹೊತ್ತಿಗೆ ವಾಪಸ್ಸು ಬಂದಾಗ, ತಾನು ಪೋಲೀಸಿಗೆ ಫೋನ್ ಮಾಡಿರುವುದಾಗಿ 'ಸೀಹಾರ್ಸ್'ನ ಮಾಲಕಿ ತಿಳಿಸಿದಳು. ಸಂಜೆ ಐದು ಗಂಟೆಗೆಲ್ಲ ಬಂದೊಬ್ಬ ಪೋಲೀಸ್ ಪೇದೆ ಠಾಣಾ ವ್ಯಾಪ್ತಿಯಲ್ಲಿ ನಾಲ್ಕು ದಿನದಿಂದ ಯಾವುದೂ ದುರ್ಘಟನೆ ನಡೆದ ಸುದ್ದಿ ಬಂದಿಲ್ಲವೆಂದು ಹೇಳಿ ಇವನನ್ನು ಪೋಲೀಸ್ ಠಾಣೆಗೆ ಕರೆದೊಯ್ದ.

ಪೋಲೀಸ್ ಠಾಣೆಯಲ್ಲಿ ಅವರಿಗೆ ಬೇಕಾದ ಎಲ್ಲ ವಿವರ ಕೊಟ್ಟು, ಇವನ ಪರ್ಸಿನಲ್ಲಿದ್ದ ಶರತ್‌ನ ಹಳೆಯದೊಂದು ಫೋಟೋ ಕೊಟ್ಟು ಹೊರಬಂದವನು ಬೆಂಗಳೂರಿಗೂ, ಅವನ ಮನೆಗೂ, ಅವನ ಸ್ನೇಹಿತರನೇಕರಿಗೂ. ಫೋನ್ ಮಾಡಿ ಎಲ್ಲವನ್ನೂ ಹೇಳಿ, ಅವರಿಗೇನಾದರೂ ಶರತ್ ಫೋನ್ ಮಾಡಿದ್ದನೋ ಕೇಳಿದ. ಎಲ್ಲೆಡೆ ನಕಾರವೇ ಉತ್ತರವಾಗಿ ಬಂತು. ಆ ರಾತ್ರಿಯೆಲ್ಲ ಇವನ ಫೋನ್ ಹೊಡೆದುಕೊಳ್ಳುತ್ತಲೇ ಇತ್ತು. ಎಲ್ಲರಿಗೂ ಫೋನ್ ಮಾಡಿ, ಎಲ್ಲರ ಫೋನ್ ರಿಸೀವ್ ಮಾಡಿ ಇವನು ಮಲಗಿಕೊಂಡಾಗ ಬೆಳಗಿನ ಜಾವ ಮೂರು ಗಂಟೆ.

ಬೆಳಿಗ್ಗೆ ತನ್ನ ರೂಮಿನ ಬಾಗಿಲು ಬಡಿತದಿಂದ ಶಿಶಿರನಿಗೆ ಎಚ್ಚರಾಯಿತು. ಬಾಗಿಲು ತೆರೆದು ನೋಡಿದವನಿಗೆ 'ಸೀಹಾರ್ಸ್'ನ ಮಾಲಕಿ ಮತ್ತು ಅವಳ ಹಿಂದೆ ಪೋಲೀಸ್ ಪೇದೆ! ಆತುರಾತುರವಾಗಿ ಮುಖ ತೊಳೆದು ಪೋಲೀಸ್ ಸ್ಟೇಷನ್ನಿಗೆ ಹೋದವನಿಗೆ ನಿರಾಸೆ ಕಾದಿತ್ತು. ಇವನೇನಾದರೂ ಹೇಳದೇ ಕೇಳದೇ ರೂಮು ಖಾಲಿ ಮಾಡಿ ಫೇರಿ ಕಿತ್ತಾನೆಂದು ಅವರು ಇವನನ್ನು ಕರೆಸಿಕೊಂಡಿದ್ದರು. ಮತ್ತೆ ನೆನ್ನೆ ಕೊಟ್ಟ ವಿವರಗಳನ್ನೇ ಮತ್ತೊಮ್ಮೆ ಕೊಟ್ಟು, ಅವರ ಅನುಮಾನಾಸ್ಪದ ಪ್ರಶ್ನೆಗಳಿಗೆಲ್ಲ ಉತ್ತರಿಸಿ, ಅವರ ಸಂಜ್ಞೆಗಳನ್ನೆಲ್ಲ ಅರ್ಥ ಮಾಡಿಕೊಂಡು, ನಗದು ಎಂದು ಪರ್ಸಿನೊಳಗಿದ್ದ ಐದು ಸಾವಿರದಷ್ಟನ್ನೂ ಅವರಲ್ಲೇ ಒಬ್ಬನಿಗೆ ಕೊಟ್ಟು, 'ಏನಾದ್ರೂ ಸುಳಿವು ಸಿಕ್ಕಿದ್ರೆ ಮೊದಲು ನಿಮಗೇ ಫೋನ್ ಮಾಡ್ತೀವಿ' ಎಂಬೆಲ್ಲ ಹುಸಿನಗೆಯ ಭರವಸೆಗಳಿಗೆಲ್ಲ ತಲೆಯಾಡಿಸಿ ಸ್ಟೇಷನ್ನಿನಿಂದ ಹೊರಬಂದ ಶಿಶಿರನ ಕಣ್ಣಾಲಿಗಳು ತುಂಬಿ ಬಂದವು. ಬೆಳಗಿನಿಂದ ಏನೂ ತಿಂದಿಲ್ಲದ ಕಾರಣ ಹೊಟ್ಟೆ ಉಬ್ಬಳಿಸಿ ಬಂದಂತಾಯ್ತು. ಅಲ್ಲೇ ರಸ್ತೆ ಬದಿಯ ಚರಂಡಿಯಲ್ಲಿ ಕಾರಿಕೊಂಡ ಮೇಲೆ ಸ್ವಲ್ಪ ಹಾಯೆನಿಸಿತು. ಬೆಳಗಿನಿಂದ ಸ್ವಿಚ್ ಆಫ್ ಮಾಡಿಕೊಂಡಿದ್ದ ಮೊಬೈಲ್ ಆನ್ ಮಾಡಿದ ಕೂಡಲೇ ಕರೆಗಳು ಬರಲಾರಂಭಿಸಿದವು. ಇದರಲ್ಲಿ ಒಂದಾದರೂ ಶರತ್‌ನ ಕರೆಯಾಗಿರಲಿ ಎಂದು ಅವನು ಹಾರೈಸಿದ್ದಷ್ಟೇ ಬಂತು.

ವಾಪಸ್ಸು ಗೆಸ್ಟ್ ಹೌಸಿಗೆ ಬಂದು ಸಾಮಾನೆಲ್ಲವನ್ನೂ ತನ್ನ ಮತ್ತು ಶರತ್‌ನ ಬ್ಯಾಗುಗಳಿಗೆ ತುಂಬಿಕೊಳ್ಳುವಾಗ ಶಿಶಿರನಿಗೆ ತಾನಿದ್ದ ಪರಿಸ್ಥಿತಿಯ ಅರಿವಾಯಿತು. ಬೆರಳುಗಳಲ್ಲಿ ಕಣ್ಣುಗಳಲ್ಲಿ ಒತ್ತಿಕೊಂಡು ಹಾಸಿಗೆಯ ಮೇಲೆ ಕುಳಿತವನಿಗೆ ತಡೆಯಲಾರದಷ್ಟು ಅಳುಬಂತು, ಅವನು ಬಿಕ್ಕಿ ಬಿಕ್ಕಿ ಅತ್ತ. ನಂತರ ಮುಖ ತೊಳೆದುಕೊಂಡು, ಗೆಸ್ಟ್ ಹೌಸ್ ಖಾಲಿ ಮಾಡಿ, ಬ್ಯಾಗುಗಳನ್ನು ಎಳೆದುಕೊಂಡು ಬೀಚಿಗೆ ಬಂದು 'ಸೀಹಾರ್ಸ್'ನ ಮುಂದಿನ ಒರಗು ಮಂಚದಲ್ಲಿ ಅತ್ತಿತ್ತ ನೋಡುತ್ತ ಸಂಜೆ ಐದರವರೆಗೆ ಕುಳಿತಿದ್ದ. ಮಧ್ಯೆ ಮಧ್ಯೆ 'ಸೀಹಾರ್ಸ್'ನ ಮಾಲಕಿಯೇ ಒತ್ತಾಯಪೂರ್ವಕವಾಗಿ ಕಳಿಸಿಕೊಟ್ಟಿದ್ದ ಎರಡು ಸ್ಟ್ರಾಬೆರಿ ಮಿಲ್ಕ್‌ಶೇಕ್‌ಗಳನ್ನು ಕುಡಿದದ್ದು ಬಿಟ್ಟರೆ ಬೇರೇನನ್ನು ತಿನ್ನಲು ಅವನಿಗೆ ಮನಸ್ಸಾಗಲೇ ಇಲ್ಲ. ಗೋವಾಕ್ಕೆ ಬಂದ ಬೆಳಗ್ಗೆಯೇ ಅವರಿಬ್ಬರೂ ವಾಪಸ್ಸು ಪ್ರಯಾಣಕ್ಕೆ ಮುಂಗಡ ಟಿಕೇಟು ಕಾಯ್ದಿರಿಸಿಕೊಂಡು ಬಂದಿದ್ದರು. ಶಿಶಿರನ ಪುಣೆ ಬಸ್ಸು ಆರು ಗಂಟೆಗಿತ್ತು; ಶರತನ ಬೆಂಗಳೂರು ಬಸ್ಸು ಆರೂವರೆಗೆ. ಕೊನೆಗೆ ಐದಕ್ಕೆಲ್ಲ ಎದ್ದು ಬೇಡಬೇಡವೆನ್ನುತ್ತಿದ್ದರೂ 'ಸೀಹಾರ್ಸ್'ನ ಮಾಲಕಿಗೆ ತಾನು ಕುಡಿದಿದ್ದ ಮಿಲ್ಕ್‌ಶೇಕ್‌ಗಳ ದುಡ್ಡು ಕೊಟ್ಟು, ಬ್ಯಾಗುಗಳನ್ನು ಹೆಗಲಿಗೇರಿಸಿಕೊಂಡು ಸಮುದ್ರದೆಡೆಗೆ ನೋಡುತ್ತ ನಿಂತ. ಸಮುದ್ರ ಎಂದಿನಂತೆ ಅಲೆಗಳಿಂದ ತುಂಬಿ ಭೋರ್ಗರೆಯುತ್ತಿತ್ತು. ಈಗ ಮುಗಿಯಿತೇನೋ, ಮುಗಿದೇ ಹೋಯಿತೇನೋ, ಹಿಂದೆ ಬರುತ್ತಿರುವುದೇ ಕೊನೆಯ ಅಲೆಯೇನೋ, ಅದರ ನಂತರ ಸಮುದ್ರದೆಲ್ಲ ಅಲೆಗಳು ಖಾಲಿಯಾಗಿಬಿಡುತ್ತವೇನೋ ಅಂತೆಲ್ಲ ಹೆದರಿಕೊಳ್ಳುತ್ತಿದ್ದ ಇವನ ಭಯಕ್ಕೆ ಆಸ್ಪದವಿಲ್ಲದಂತೆ ಅಲೆಗಳು ಮತ್ತೆ ಮತ್ತೆ ಹುಟ್ಟಿ ಬರುತ್ತಿದ್ದವು...

---

ಶಿಶಿರನಿಗೆ ತಿಳಿದಿಲ್ಲದ ಕಾಗದದ ಮಡತೆಯೊಂದು ಅವನು ಒಯ್ಯುತ್ತಿದ್ದ ಶರತ್‌ನ ಕೈ ಬ್ಯಾಗಿನ ಹೊರ ಜ಼ಿಪ್ಪಿನಲ್ಲಿತ್ತು. ಆ ಕಾಗದದಲ್ಲಿ ಶರತ್ ಎರಡು ದಿನದ ಹಿಂದೆ ಬೀಚಿನಲ್ಲಿ ಕುಳಿತು ಸತ್ತ ಸಮುದ್ರಕ್ಕೆ ಬರೆದ ಶ್ರದ್ಧಾಂಜಲಿಯಂತಹುದೊಂದಿತ್ತು...

"...ನಾನು ನನ್ನ ಸೃಜನಶೀಲತೆಯ ಒರತೆಯನ್ನು ಮಾನವ ಅಂಡಾಣುಗಳಿಗೆ ಸಮೀಕರಿಸಿಕೊಂಡಿದ್ದೆ. ಪ್ರತೀ ತಿಂಗಳು ಮೊದಲೇ ನಿರ್ಧರಿಸಿಕೊಂಡಂತೆ ಒಂದೊಂದೇ ಅಂಡಣು, ಅಂಡಾಣುಕೂಪದಿಂದ ಬೆಳೆದು, ನಡೆದು, ಗರ್ಭಕೋಶದ ಬಾಗಿಲಿಗೆ ಬಂದು ಕಾದು, ಫಲಿತವಾಗುವಂತೆ ನನ್ನೆಲ್ಲ ಕಲ್ಪನೆಗಳೂ ವಾರಕ್ಕೊಂದೊಂದರಂತೆ ಬೆಳೆದು, ಫಲಿತಗೊಂಡು ಸುಂದರವಾದ ಸೃಷ್ಟಿಯಾಗುತ್ತಿದ್ದವು. ನನಗೆ ನನ್ನ ಕಲ್ಪನೆಗಳ ಬಗ್ಗೆ ಹೆಮ್ಮೆ ಇತ್ತು, ಅವು ರೂಪಿತವಾಗುವ ಸೊಬಗಿನ ಬಗ್ಗೆ ಗರ್ವವಿತ್ತು. ನನ್ನ ಕನಸುಗಳು ಫಲವಾಗಿ  ನನಸಾಗುವ ಭರವಸೆಯಿತ್ತು. ಅಂಡಾಣುಕೂಪವೆಂದರೆ ಎಲ್ಲ ಮೊದಲೇ ಲೆಕ್ಕ ಹಾಕಿದಷ್ಟು ಮಾತ್ರ ಅಂಡಗಳು ತಾನೇ? ಹಾಗಿದ್ದರೂ ನನ್ನ ಕಲ್ಪನೆಯ ಕೂಪದಲ್ಲಿ ಅಸಂಖ್ಯಾತ ಕಲ್ಪನೆಯ ಅಂಡಾಣುಗಳಿವೆ ಅಂದುಕೊಂಡಿದ್ದೆ. ಪ್ರತೀವಾರ ಒಂದೊಂದು ಸುಂದರ ಸೃಷ್ಟಿ, ಓದಿಕೊಂಡವರಿಗೆ 'ಆಹಾ, ಇದು ಹೀಗೆಲ್ಲ ಹೇಗೆ ಸಾಧ್ಯ!?' ಎನ್ನುವ ಅಚ್ಚರಿ. ಅವರ ಪ್ರತಿಕ್ರಿಯೆ–ಮಾರುತ್ತರಗಳಿಂದ ನನಗೂ 'ಹೆಡಸು'! ಆದರೆ ನಿನಗೇ ಗೊತ್ತಿರೋ ಹಾಗೆ ಕೊನೇ ಆಗಸ್ಟಿನಲ್ಲಿ ನನ್ನ ಜೀವನದಲ್ಲಾದ ಬದಲಾವಣೆ ನನ್ನೆಲ್ಲ ಆಲೋಚನೆಗಳನ್ನು ಬುಡಮೇಲು ಮಾಡಿತು. ನನ್ನ ಕಲ್ಪನೆಯ ಅಂಡಾಣುಕೂಪದೆಲ್ಲ ಸರಕು ಸೋರಿ ಹೋದಂತೆ, ಅಂದಿನಿಂದ ಇದೂವರೆಗೂ ಒಂದೂ ಸೃಷ್ಟಿ ನನ್ನಿಂದ ಸಾಧ್ಯವಾಗಿಲ್ಲ. ನನ್ನ ಕನಸುಕಣ್ಣುಗಳಿಗೆಲ್ಲ ವಾಸ್ತವತೆಯ ಉರಿಬೆಂಕಿ ತಾಗಿ ಕನಸು ಕಾಣದ ಕುರುಡನಾಗಿ, ನನ್ನ ಕಲ್ಪನೆಯ ಅಂಡಾಣುಕೂಪವೆಲ್ಲ ಖಾಲಿಯಾಗಿ ನನ್ನ 'ಕ್ರಿಯಾಶೀಲತೆ'ಗೆ ಮುಟ್ಟುಬಂದಂತಾಗಿ...

ಅಥವಾ ಯಾರಿಗ್ಗೊತ್ತು, ನನ್ನ ಉಳಿದೆಲ್ಲ ಅಂಡಾಣುಗಳಿಗೀಗ ನನ್ನ ಸೃಷ್ಟಿಗಳ ನಿರರ್ಥಕತೆಯ ಸುದ್ದಿ ತಲುಪಿರಬಹುದು. ನಿಜವಾಗಿಯೂ ಗರ್ಭದ್ವಾರಕ್ಕೆ ಬಂದ ಇದುವರೆಗಿನ ಅಂಡಾಣುಗಳೂ ಫಲಿತವಾಗದೇ ಕಾದು, ಹಾಗೇ ಹರಿದುಹೋಗಿರುವ ಸುದ್ದಿ ಗೊತ್ತಾಗಿ, ನನ್ನ ಗರ್ಭದೊಳಗಿರೋ ಉಳಿದಿರೋ ಅಂಡಾಣುಗಳು ಯಾವುವೂ ಬೆಳೆದು ಗರ್ಭದ್ವಾರಕ್ಕೆ ಬರಲಿಚ್ಛಿಸಿದೇ ನೀಮುಂದು–ತಾಹಿಂದು ಅಂತಾ ತಮ್ಮ ತಮ್ಮೊಳಗೇ ಕಚ್ಚಾಡುತ್ತಿರಬಹುದು!

ನನ್ನೆಲ್ಲ ಸೃಷ್ಟಿಗಳೂ ಪಕ್ವವಾಗದ ಭ್ರೂಣರೂಪಿಗಳೆಂದು ಹೆದರಿ ನನ್ನ ಆತ್ಮ ಹೊಸ ಕಲ್ಪನೆಗಳನ್ನೆಲ್ಲ ನಿಲ್ಲಿಸಿಬಿಟ್ಟಿದೆ, ನಾನು ಕಂಡ ಕನಸುಗಳೂ ನನಸಿನ ತೀರ ತಲುಪದ ಅಲೆಗಳಾಗುತ್ತವೆ ಅಂತೆಣಿಸಿ, ನನ್ನ ಹೃದಯದ ಸಮುದ್ರ 'ಸಾಕಿಷ್ಟು ಅಲೆಗಳು' ಅಂತಾ ಫರಮಾನು ಹೊರಡಿಸಿ ತನ್ನಲ್ಲಿ ತಾನೇ ತಟಸ್ಥವಾಗಿ ಹೋಗಿದೆ. ಹಾಗಾಗಿಯೇ ನನ್ನ ಸಮುದ್ರದಲ್ಲಿ ಅಲೆಗಳಿಲ್ಲ, ಇದ್ದವೆಲ್ಲ ಆಗಲೇ ಖಾಲಿಯಾಗಿವೆ, ಮತ್ತು ಸಮುದ್ರ ತನ್ನನ್ನು ತಾನೇ ಉಸಿರುಗಟ್ಟಿಸಿಕೊಂಡು ಸತ್ತು ಹೋಗಿದೆ...

..."

ಹಾಗೂ ಪತ್ರದ ಮಡಿಕೆಯೊಳಗೆ ಶರತ್ ಯಾವಾಗಲೂ ತನ್ನ ಪರ್ಸಿನೊಳಗಿಟ್ಟುಕೊಳ್ಳುತ್ತಿದ್ದ 'ನೇಹಾ'ಳ ಪುಟ್ಟದೊಂದು ಭಾವಚಿತ್ರವೂ ಇತ್ತು!

## ಹ್ಯಾವ್ ಎ ನೈಸ್ ಡೇ

**ಶಿವಕುಮಾರ ಕೆ. ಎಸ್.** shivuks@gmail.com